# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. 776 / 2021</u>

ಸಿಡಬ್ಲ್ಯೂ- **06**
ಪಿಡಬ್ಲ್ಯೂ-**06**

<u>ದಿನಾಂಕಃ **09.01.2025.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರುಃ | - | ನೀಲಮ್ಮ |
| ಗಂಡನ ಹೆಸರುಃ | - | ರಾಜಪ್ಪ |
| ವಯಸ್ಸುಃ | -? | **60** ವರ್ಷ |
| ಉದ್ಯೋಗಃ | - | ಮನೆಕೆಲಸ. |
| ವಾಸಸ್ಥಳಃ | - | ಅಲ್ಲಿಪೂರ. |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ಚಾಸಾ-1 ರವರು ನನ್ನ ಸೊಸೆ ಆಗಬೇಕು. ಚಾಸಾ-7 ರವರ ಪರಿಚಯ ನನಗೆ ಇರುವುದಿಲ್ಲ. ಕಳೆದ 4 ವರ್ಷಗಳ ಹಿಂದೆ ನಾನು ಮತ್ತು ಚಾಸಾ-1 ರವರು ಕೂಡಿ ಯಾದಗಿರಿ ಸಂತೆಗೆ ಹೋಗಬೇಕೆಂದು ನಮ್ಮೂರಿನ ಗೇಟ್ ಹತ್ತಿರ ಇದ್ದಾಗ ಚಾಸಾ-7 ರವರ ಆಟೋ ಬಂದಿದ್ದು ಅದರಲ್ಲಿ ನಾವು ಕುಳಿತು ಯಾದಗಿರಿಗೆ ಬರುತ್ತಿರುವಾಗ ಕಂಚರಗಾರಹಳ್ಳಿ ಗೇಟ ಹತ್ತಿರ ಒಂದು ಬಿಳಿ ವಾಹನವು ಹಿಂದುಗಡೆಯಿಂದ ಬಂದು ನಮ್ಮ ಆಟೋಕ್ಕೆ ಗುದ್ದಿತ್ತು. ಸದರಿ ಬಿಳಿ ವಾಹನವು ಗೂಡ್ಸ್ ವಾಹನ ಆಗಿತ್ತು. ನಮ್ಮ ಆಟೋ ಡಿಕ್ಕಿ ಪಡಿಸಿದ ನಂತರ ನಾವು ಆಟೋ ಸಮೇತ ಕೆಳಗೆ ಬಿದ್ದೇವು ಇದರಿಂದ ನನಗೆ ಕೈಗೆ, ಕಾಲಿಗೆ ಹಾಗೂ ಇತರ ದೇಹದ ಅಂಗಗಳಿಗೆ ಸಣ್ಣ ಪುಟ್ಟಗಾಯ ಆಗಿದ್ದವು. ಚಾಸಾ-1 ರವರ ಎದೆಯ ಎಲುಬು ಮುರಿದಿತ್ತು. ಅದೇ ರೀತಿ ಚಾಸಾ-1 ರವರ ಹೊಟ್ಟೆಗೆ ಗಾಯ ಆಗಿತ್ತು. ಅದೇ ರೀತಿ ಆಟೋದ ಚಾಲಕನಿಗೂ ಸಹ ಪೆಟ್ಟು ಆಗಿತ್ತು. ಬಿಳಿ ಗಾಡಿಯ ತಪ್ಪಿನಿಂದ ಅಪಘಾತ ಆಗಿರುತ್ತದೆ. ಬಿಳಿ ಗಾಡಿಯ ವಾಹನದ ಚಾಲಕನನ್ನು ನಾನು ನೋಡಿರುವುದಿಲ್ಲ, ಏಕೆಂದರೆ ಆತನ್ನು ಓಡಿ ಹೋಗಿದ್ದನ್ನು. ಅಪಘಾತ ಸ್ಥಳದಲ್ಲಿ ಇದ್ದ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುವವರು ಬಂದು ಆಟೋವನ್ನು ಮೇಲಕ್ಕೆ ಎತ್ತಿ ನಮ್ಮಗೆ ನೀರು ಕುಡಿಸಿ ನಮ್ಮನ್ನು ಅಲ್ಲಿ ಇದ್ದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು, ನಂತರ ನಮ್ಮನ್ನು ಯಾದಗಿರಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದರು.

ಅಪಘಾತ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಪೋಟೋದಲ್ಲಿ ಇರುವ ಬಿಳಿ ಗಾಡಿಯನ್ನು ನಿಮ್ಮಗೆ ತೋರಿಸುತ್ತೇನೆ ಆದರೆ ಸಾಕ್ಷಿಯು ನನಗೆ ಗುರುತು ಹಿಡಿಯಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಂತರ ಬಿಳಿ ಗಾಡಿಯ ವಾಹನದ ಚಾಲಕನ ಹೆಸರು ಪ್ರಶಾಂತ ಕುಮಾರ ಎಂದು ಗೊತ್ತಾಯಿತು. ಆತನನ್ನು ನನಗೆ ತೋರಿಸಿದ್ದಾರೆ ಗುರುತು ಹಿಡಿಯಲು ಆಗುವುದಿಲ್ಲ ನಾನು ಪೊಲೀಸರ ಮುಂದೆ ಪುರವಣಿ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ಸದರಿ ವಾಹನವು ಬುಲರೋ ಗೂಡ್ಸ್ ವಾಹನ ಇತ್ತು ಎಂದರೆ ಸರಿ. ಸದರಿ ವಾಹನದ ಸಂಖ್ಯೆಃ ಕೆಎ-32-ಸಿ-9812 ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಂತರ ಅಪಘಾತ ಪಡಿಸಿದ ವಾಹನದ ಚಾಲಕನನ್ನು ನಮ್ಮಗೆ ಪೊಲೀಸ್ ಠಾಣೆಯಲ್ಲಿ ಪೊಲೀಸರು ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿ ವಾಹನದ ಚಾಲಕನನ್ನು ನಾನು ಗುರುತಿಸಿದ್ದೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನೇ ಆ ದಿನ ಅಪಘಾತ ಪಡಿಸಿ ಓಡಿ ಹೋದ ವ್ಯಕ್ತಿಯಾಗಿರುತ್ತಾನೆ. ದಿನಾಂಕಃ 22.10.2021 ರಂದು ನಾನು ಆರೋಪಿತನನ್ನು ಗುರುತಿಸಿ ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪುರವಣಿ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಎಸ್.ಪಿ. ರವರಿಂದಃ

ಅಪಘಾತ ಸ್ಥಳದಲ್ಲಿ ಅಗಲವಾದ ರಸ್ತೆ ಇರುತ್ತದೆ ಎಂದರೆ ಸರಿ, ಸದರಿ ಸ್ಥಳದಲ್ಲಿ ವಾಹನ ಸಂಚಾರ ಬಹಳ ಇರುತ್ತದೆ ಎಂದರೆ ಸರಿ. ಆಟೋದ ಚಾಲಕನ ಹಿಂಬದಿಯ ಆಸನದಲ್ಲಿ ಆಟೋದ ಚಾಲಕನ ಕಡೆಗೆ ಮುಖಮಾಡಿ ನಾನು ಮತ್ತು ಚಾಸಾ-1 ರವರು ಕುಳಿತ್ತಿದ್ದೇವು ಎಂದರೆ ಸರಿ. ನಮ್ಮ ಎದುರಿಗೆ ಯಾವುದೇ ವಾಹನಗಳು ಬಂದಿರಲಿಲ್ಲ. ನಮ್ಮ ಎದುರಿಗೆ ಬರುತ್ತಿದ್ದ ವಾಹನಗಳು ಕಾಣುತ್ತಿದ್ದವು ಎಂದರೆ ಸರಿ. ನಾವು ಆಟೋದ ಚಾಲಕನ ಮುಂದುಗಡೆ ಮುಖ ಮಾಡಿ ಕುಳಿತ್ತಾಗ ಹಿಂದುಗಡೆ ಬರುತ್ತಕ್ಕಂತ ವಾಹನಗಳು ಕಾಣುವುದಿಲ್ಲ ಎಂದರೆ ಸಾಕ್ಷಿಯು ಒರಿಯಾಗಿ ಕುಳಿತ್ತಿದ್ದೇವು ಎಂದು ಹೇಳುತ್ತಾರೆ. ಆ ದಿನ ನಮ್ಮ ಆಟೋದ ಚಾಲಕನು ಅದನ್ನು ಅತೀ ವೇಗವಾಗಿ ಚಲಾಯಿಸುತ್ತಿದ್ದನ್ನು ಎಂದರೆ ಸರಿಯಲ್ಲ. ನಮ್ಮ ಆಟೋದ ಚಾಲಕನ ತಪ್ಪಿ ನಿಂದ ಆ ದಿನ ಅಪಘಾತ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಆಟೋವು ವಿಮೆಗೆ ಒಳಪಡದೇ ಇರುವ ಕಾರಣ ಅಪಘಾತ ಪರಿಹಾರವನ್ನು

ಪಡೆಯುವ ಸಲುವಾಗಿ ನಾನು ಹಾಗೂ ಚಾಸಾ-1 ರವರು ಕೂಡಿ ಆರೋಪಿತನ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತ ಆದ ದಿನದಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಹೇಳಿಕೆಯನ್ನು ಹಳ್ಳಿ ಕಚೇರಿಯಲ್ಲಿ ಪಡೆದುಕೊಂಡಿರುತ್ತಾರೆ. ಕಳೆದ 4 ವರ್ಷಗಳ ಹಿಂದೆ ನಾನು ಮತ್ತು ಚಾಸಾ-1 ರವರು ಕೂಡಿ ಚಾಸಾ-7 ರವರ ಆಟೋದಲ್ಲಿ ಯಾದಗಿರಿ ಸಂತೆಗೆ ಬರುತ್ತಿದ್ದಾಗ ಹಿಂದುಗಡೆಯಿಂದ ಬಿಳಿ ಬಣ್ಣದ ಗೂಡ್ಸ್ ವಾಹನ ಬಂದು ನಮ್ಮ ಆಟೋಕ್ಕೆ ಡಿಕ್ಕಿಪಡಿಸಿತ್ತು ಎಂದು ನಾನು ಸುಳ್ಳು ಸಾಕ್ಷ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವ್ಯಕ್ತಿಯು ಈಗ ನ್ಯಾಯಾಲಯದ ಮುಂದೆ ಇರುತ್ತನೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಪರಿಹಾರವನ್ನು ಪಡೆಯುವ ಸಲುವಾಗಿ ನಾವು ಬುಲರೋ ವಾಹನದ ಮೇಲೆ ನಾನು ಹಾಗೂ ಚಾಸಾ-1 ರವರು ಕೂಡಿ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.